ದಿನಾಂಕಃ 18.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿ.ಪಿ.20 | ವೈದ್ಯಕೀಯ ತಪಾಸಣಾ ವರದಿ |
| ನಿ.ಪಿ.21 | ಕ್ಷ ಕಿರಣ ಚಿತ್ರಣ |

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಆರ್ . ಎಸ್ . ಎಸ್ . ವಕೀಲರಿಂದ

ಅರ್ಜಿದಾರರನ್ನು ದಿಃ 02.12.2024 ರಂದು ಒಂದೇ ಬಾರಿ ನೋಡಿರುತ್ತೇನೆ ಎಂದರೆ ಸರಿ. ಅರ್ಜಿದಾರರ ಮೂಳೆ ಮುರಿತಕ್ಕೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ. ಮೂಳೆ ಮುರಿತ ಕೂಡಿಕೊಂಡಿರುತ್ತದೆ. ಅರ್ಜಿದಾರನಿಗೆ ಮೂಳೆ ಸುತ್ತ ಇರುವ ಮಾಂಸಖಂಡಗಳಿಗೆ ಗಾಯ ಆಗಿರುವುದರಿಂದ ಅವನಿಗೆ ಶೇ 12 ರಷ್ಟು ನ್ಯೂನತೆ ಕಂಡು ಬಂದಿರುತ್ತದೆ. ಅರ್ಜಿದಾರನಿಗೆ ತನ್ನ ಕೆಲಸ ಕಾರ್ಯ ಮಾಡಲು ತೊಂದರೆ ಇದೆ ಎಂದು ಊಹಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಅವರು ಹೇಳಿರುವಂತೆ ಹಾಲಿನ ಡೈರಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ಶೇ 12 ರಷ್ಟು ಅಂಗ ನ್ಯೂನತೆ ಇರದೇ ಇದ್ದರೂ ಸಹಿತ ಅವರಿಗೆ ಹೆಚ್ಚಿನ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಆ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರನ್ನು ಕೂಗಿಸಿ ಕರೆಯಿಸಲಾಗಿ ಗೈರು ಹಾಜರಿದ್ದ ಕಾರಣದಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು